ಬಹುಶಃ ಅವನಿಗೆ ಆರೋ ಏಳೋ ವರ್ಷ ವಯಸ್ಸಿದ್ದಿರಬಹುದು ಆಗ. ಹಸಿವು ಕಾಡುತ್ತಿರುವುದು ಮಾತ್ರ ತಿಳಿಯಬಹುದಾಗಿದ್ದ ಆ ವಯಸ್ಸಿನಲ್ಲೂ ಅವನಿಗೆ ಮನೆಯಲ್ಲಿನ ಕಡು ಬಡತನ ಅನುಭವಕ್ಕೆ ಬರುತ್ತಿತ್ತು. ಅದೆಷ್ಟೋ ರಾತ್ರಿಗಳಲ್ಲಿ ಅಮ್ಮ ತನಗೆ ಊಟ ಬಡಿಸಿ ಪಾತ್ರೆ ಖಾಲಿ ಮಾಡುತ್ತಿದ್ದುದನ್ನು ಕಂಡು ಇವ 'ಅಮ್ಮ ನಿನಗೆ...' ಎಂದು ಕೇಳಿದರೆ 'ಏನೋ ಮಗು, ಮಧ್ಯಾಹ್ನ ಉಂಡದ್ದು ಜೀರ್ಣವಾಗಿಯೇ ಇಲ್ಲ' ಎನ್ನುತ್ತಿದ್ದವಳು ತಾನು ಉಂಡೆದ್ದು ಈಚೆ ಬಂದ ಕೂಡಲೇ ಚೆಂಬುಗಟ್ಟಲೆ ನೀರು ಕುಡಿದು ಹೊಟ್ಟೆ ತುಂಬಿಸಿಕೊಳ್ಳುವುದನ್ನು ನೋಡಿದ್ದಾನೆ. ಆಗೆಲ್ಲ ಅವನಲ್ಲಿ ತಾನು ದೊಡ್ಡವನಾಗಿ ಸಂಪಾದಿಸಿ ತರುವ ಹಾಗಾದಾಗ ಮೊದಲಿಗೆ ಅಮ್ಮ ಹೊಟ್ಟೆತುಂಬ ಉಣ್ಣುವಂತೆ ಮಾಡಬೇಕು ಎನ್ನುವ ಬಯಕೆ ಹುಟ್ಟುತ್ತಿತ್ತು.

ಕಷ್ಟಪಟ್ಟು ಅಮ್ಮ ತನ್ನನ್ನು ಶಾಲೆಗೆ ಕಳುಹಿಸುತ್ತಿದ್ದಾಳೆನ್ನುವುದರ ಅರಿವಿದ್ದ ಅವ ಹರಕು ಚಡ್ಡಿ ಮತ್ತು ಅಂಗಿಯಲ್ಲಿಯೇ ಹೋಗುತ್ತಿದ್ದವನನ್ನು ಅಲ್ಲಿ ಯಾರೋ ಹುಡುಗರು 'ಯಾಕೋ ಈ ಪಾಟಿ ಹರಿದು ಹೋದ ಅಂಗಿಯನ್ನು ಹಾಕಿಕೊಳ್ಳುತ್ತೀಯ... ಹೊಸ ಅಂಗಿ ತಂದು ಕೊಡುವುದಿಲ್ಲವಾ ನಿನ್ನ ಅಪ್ಪ...' ಎಂದು ಕೇಳಿದರೆ ಇವ ಪಿಳಿ ಪಿಳಿ ನೋಡುತ್ತ ಏನು ಉತ್ತರ ಕೊಡುವುದೆಂದು ತಡಕಾಡುತ್ತಿರುವಾಗಲೇ ಪ್ರಪಂಚದ ಎಲ್ಲ ವಿಷಯವೂ ತನಗೆ ಗೊತ್ತೆನ್ನುವ ಪೋಸು ಕೊಡುತ್ತಿದ್ದ ಮೇಲಿನ ಕ್ಲಾಸಿನವನೊಬ್ಬ, 'ಅವನಿಗೆಲ್ಲಿಯ ಅಪ್ಪ... ದಿನಕ್ಕೊಬ್ಬರು ಹೊಸಬರು... ಅದು ಹೇಗೆ ಹೆಸರು ಹೇಳುತ್ತಾನೆ...' ಎಂದಿದ್ದ. ಯಾವುದೂ ಅರ್ಥವಾಗದ ಇವ ಸುಮ್ಮನೇ ನಿಂತಿದ್ದರೆ ಎಲ್ಲರೂ ಏನೋ ತಿಳಿದವರಂತೆ ಗೊಳ್ಳೆಂದು ನಕ್ಕಿದ್ದರು. ಅವ ಹೇಳಿದ್ದು ಏನೆಂದು ಅರ್ಥವಾಗದಿದ್ದರೂ ತನ್ನ ವಿಷಯಕ್ಕೇ ಅವರೆಲ್ಲ ನಕ್ಕಿದ್ದೆಂದು ಗೊತ್ತಾದಾಗ ಇವನಿಗೆ ತೀರಾ ನಾಚಿಕೆಯಾಗಿತ್ತು. ತನ್ನದು ಹರಕಲು ಅಂಗಿ ಚಡ್ಡಿ ಬೇರೆ.

ತನಗೆ ಅರ್ಥವಾಗದ ಆ ವಿಚಾರವನ್ನು ಅಂದು ಸಂಜೆ ಮನೆಗೆ ಹೋದ ಕೂಡಲೇ ಅಮ್ಮನೊಂದಿಗೆ ಕೇಳಬೇಕೆಂದುಕೊಂಡರೂ ಕೇಳಲಿಲ್ಲ ಅವ. ಹಿಂದೊಮ್ಮೆ ಶಾಲೆಯ ಮಕ್ಕಳೆಲ್ಲ ತಮ್ಮ ತಮ್ಮ ಅಪ್ಪಂದಿರ ಬಗ್ಗೆ ಕೊಚ್ಚಿಕೊಳ್ಳುತ್ತ ಅವರು ಅಷ್ಟು ಸಂಪಾದನೆ ಮಾಡುತ್ತಾರೆ, ನಮ್ಮಪ್ಪನಿಗೆ ಇಷ್ಟು ಸಂಬಳ ಎಂದೆಲ್ಲ ಹೇಳಿಕೊಳ್ಳುತ್ತಿದ್ದಾಗ ಏನೂ ಹೇಳಿಕೊಳ್ಳಲು ತೋಚದೆ ಸಪ್ಪೆ ಮೋರೆ ಹಾಕಿಕೊಂಡು ಮನೆಗೆ ಹೋದವ ಅಮ್ಮನೊಂದಿಗೆ 'ನನ್ನ ಅಪ್ಪ ಯಾರಮ್ಮ... ಏನು ಮಾಡುತ್ತಾರೆ... ಅವರಿಗೆ ಎಷ್ಟು ದುಡ್ಡು ಬರುತ್ತದೆ' ಎಂದು ಕೇಳಿದರೆ ಏನೂ ಉತ್ತರ ಕೊಡದ ಆಕೆ ಬುಳು ಬುಳು ಅತ್ತದ್ದು ನೋಡಿ ಇವನಿಗೆ ತೀರಾ ಬೇಜಾರಾಗಿತ್ತು. ಅಂದೇ ಇನ್ನೆಂದೂ ತಾನು ನೋಡದ ಅಪ್ಪನ ಬಗ್ಗೆ ಕೇಳಲೇಬಾರದು ಎಂದುಕೊಂಡಿದ್ದ. ತನಗೂ ಹೇಳಿಕೊಳ್ಳಲು ಸಂಪಾದನೆ ಮಾಡುವ ಅಪ್ಪನೊಬ್ಬನಿದ್ದಿದ್ದರೆ ಎಂದುಕೊಳ್ಳುತ್ತಲೇ ಮಲಗಿದ್ದ ಅವನಿಗೆ ಅಂದಿನ ಕನಸಿನ ತುಂಬ ಅಪ್ಪನೇ. ಸ್ಪಷ್ಟವಾಗಿ ಮುಖ ಕಾಣಿಸದ ಆ ಅಪ್ಪನ ಕೈಯ್ಯಲ್ಲಿ ಝಣ ಝಣ ಎನ್ನುತ್ತಿದ್ದ ಹಣ. ಮಾರನೆ ದಿನವಿಡೀ 'ತನಗೂ ಒಬ್ಬ ಅಪ್ಪನಿರಬೇಕಿತ್ತು. ಅವನು ತಮ್ಮ ಮನೆಯಲ್ಲಿಯೇ ತಮ್ಮ ಜೊತೆಯಲ್ಲಿಯೇ ಕನಸಿನಲ್ಲಿ ಕಂಡ ಝಣ ಝಣ ಹಣದೊಂದಿಗೆ ಇದ್ದು ತಾನು ಮತ್ತು ತನ್ನ ಅಮ್ಮ ಹೊಟ್ಟೆ ತುಂಬ ಉಣ್ಣುವಂತೆ ಇರಬೇಕಿತ್ತು' ಎನ್ನುವ ಆಸೆಯಲ್ಲಿಯೇ ಕಳೆದಿದ್ದ.

ಹೈಸ್ಕೂಲಿಗೆ ಹೋಗುವಾಗ ಅವನಿಗೆ ಕಾಲಿಗೊಂದು ಚಪ್ಪಲಿ ಬೇಕೆಂದು ಬಹಳವಾಗಿ ಅನ್ನಿಸುತ್ತಿತ್ತು. ಬೆಳಿಗ್ಗೆಯಿಂದ ಸಂಜೆಯ ತನಕ ಬೇರೆಯವರ ಗದ್ದೆ ಬಿಟ್ಟರೆ ಮನೆಗಳಲ್ಲಿ ದುಡಿಯುವ ಅಮ್ಮನ ಮಗನಾದ ತಾನು ಹೀಗೆ ಶಾಲೆಗೆ ಹೋಗುವಂತಾದದ್ದೇ ತನ್ನ ಅದೃಷ್ಟ ಎಂದು ಅನ್ನಿಸಿದರೂ ಮೂರು ಮೈಲಿ ದೂರದ ಶಾಲೆಗೆ ನಡೆದುಕೊಂಡೇ ಹೋಗುವಾಗ, ದಾರಿಯಲ್ಲಿನ ಕಲ್ಲು ಮುಳ್ಳುಗಳು ಕಾಲಿಗೆ